ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : 08382 226406, Telephone: 08382 226603 (Fax)
Email: dckarwar@gmail.com
Website: http://uttara kannada.nic.in

ನಂ.ಭೂಮಿ/ಗಣಕೀಕರಣ/ವಿವ-04/2017-18 ದಿನಾಂಕ: 08-08-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

2017-18ನೇ ಸಾಲಿಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ ಹಾಗೂ ಅಧೀನ ತಹಶೀಲ್ದಾರ, ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ ಯಲ್ಲಾಪುರ, ಮುಂಡಗೋಡ, ಹಳಿಯಾಳ, ಜೋಯಿಡಾ ಕಛೇರಿಗಳಿಗೆ ಪಹಣೀ ಪತ್ರಿಕೆ ಮುದ್ರಣ ಮಾಡಲು ಝೇರಾಕ್ಸ ಪೇಪರ್‌ಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ. ಸದ್ರಿ ಝೇರಾಕ್ಸ ಪೇಪರ್ ಖರೀದಿಸಲು ಆಯುಕ್ತರು ಭೂ ಮಾಪನಾ ಮತ್ತು ಪದನಿಮಿತ್ತ ನಿರ್ದೇಶಕರು (ಭೂಮಿ & ಯು.ಪಿ.ಓ.ಆರ್) ಬೆಂಗಳೂರು ರವರು ಅನುಮತಿ ನೀಡಿರುತ್ತಾರೆ.

ಕಾರಣ, The Karnataka Transparency in Public Procurements Act, 1999 (as amended by Act 21 of 2001 and 4 of 2003) ಮತ್ತು 27ನೇ ನಿಯಮದಂತೆ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ರವರ ಕಾರ್ಯಾಲಯಕ್ಕೆ ಈ ಕೆಳಕಾಣಿಸಿದ ವಿವರಣೆವುಳ್ಳ ಲೇಖನ ಸಾಮಗ್ರಿ ಹಾಗೂ ಇತರೆ ಸಾಮಗ್ರಿಗಳನ್ನು ಪೂರೈಸುವ ಕುರಿತು ಅರ್ಹತೆಯುಳ್ಳ ಟೆಂಡರುದಾರರಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ.

**ಸರಬರಾಜು ಮಾಡಬೇಕಾದ ಲೇಖನ ಸಾಮಗ್ರಿ ಹಾಗೂ ಇತರೆ ಸಾಮಗ್ರಿಗಳ ವಿವರ**

| ಕ್ರ. ಸಂ | ಸಾಮಗ್ರಿ ಹೆಸರು | 6 ತಿಂಗಳಿಗೆ ಬೇಕಾಗುವ ಅಂದಾಜು ಪ್ರಮಾಣ | ದರ ಒಂದಕ್ಕೆ |
|---|---|---|---|
| 1 | 2 | 3 | 4 |
| 1 | ಝುರಾಕ್ಸ ಪೇಪರ್ F/S size 80GSM | 800 (Rim) | 1 ರಿಮ್ |
| 2 | ಝುರಾಕ್ಸ ಪೇಪರ್ A/4 size 80 GSM | 500 (Rim) | 1 ರಿಮ್ |
| 3 | Blank DVD ( Sony/Moserbaer) | 100 | 1 ಕ್ಕೆ |

| ಅಲ್ಪಾವಧಿ ಟೆಂಡರ್ ಘಟನಾವಳಿಗಳು | | |
|---|---|---|
| 1 | ಟೆಂಡರ ಅಂದಾಜು ಮೊತ್ತ | ಅಂದಾಜು ರೂ.4.00 ಲಕ್ಷ |
| 1. | ಖಾಲಿ ಟೆಂಡರ್ ಫಾರಂ ಬೆಲೆ | ಮೇಲಿನ ನಮೂನೆಯಂತೆ |
| 2 | ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ | ದಿನಾಂಕ: 19-08-2017 ಸಂಜೆ 5.30 ರವರೆಗೆ |
| 3 | ಟೆಂಡರ್ ತೆರೆಯುವ ಸ್ಥಳ | ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ, ಕಾರವಾರ ರವರ ಕಚೇರಿ |
| 4 | ಟೆಂಡರ್ ತೆರೆಯುವ ದಿನಾಂಕ/ಸಮಯ | ದಿನಾಂಕ: 21-08-2017 ಬೆಳಿಗ್ಗೆ 11:00 ಗಂಟೆ |
| 5 | ಇ.ಎಂ.ಡಿ ಮೊತ್ತ | ರೂ.10,000/-ರಷ್ಟು DD ಮೂಲಕ ಪಾವತಿ ಮಾಡುವುದು |

**ಟೆಂಡರಿಗೆ ಸಂಬಂಧಿಸಿದ ಇತರೆ ಶರ್ತುಗಳು:**

1) ಟೆಂಡರದಾರರು ಒಂದೇ ನಿಖರವಾದ ದರವನ್ನು ನಮೂದಿಸತಕ್ಕದ್ದು.

2) ಯಶಸ್ವಿ ಟೆಂಡರದಾರರು ಅಂಗೀಕೃತವಾದ ದರಗಳಲ್ಲಿ 80 GSM ಮಾದರಿಯ ಝುರಾಕ್ಸ ಪೇಪರಗಳನ್ನು ಈ ಕಾರ್ಯಾಲಯಕ್ಕೆ ಸರಬರಾಜು ಮಾಡುವ ಜವಾಬ್ದಾರಿ ಟೆಂಡರದಾರರದು ಆಗಿರುತ್ತದೆ.

3) ಲೇಖನ ಸಾಮಗ್ರಿಗಳಿಗೆ ನಮೂದಿಸಿರುವ ದರವು 6 ತಿಂಗಳ ಅವಧಿ ವರೆಗೆ ಚಾಲ್ತಿಯಲ್ಲಿರುತ್ತದೆ.

4) ಯಾವುದೇ ಅಥವಾ ಎಲ್ಲಾ ದರ ನಮೂದಿಸಿದ ಪಟ್ಟಿಗಳನ್ನು ಸ್ವೀಕರಿಸುವ, ರದ್ದುಪಡಿಸುವ ಇಲ್ಲವೇ ತಿರಸ್ಕರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.

5) ಟೆಂಡರದಾರರಿಗೆ ನೀಡಿದ ಆದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.

6) ಟೆಂಡರ ದರ ಮಂಜೂರಿ ಆದ ಸಂಸ್ಥೆಯವರು ಬೇಡಿಕೆಯಂತೆ 3 ದಿನಗಳಲ್ಲಿ ಸರಬರಾಜು ಮಾಡತಕ್ಕದ್ದು. ಈ ಬಗ್ಗೆ ಹೆಚ್ಚುವರಿ ಸಾಗಣೆ ವೆಚ್ಚ ನೀಡಲಾಗುವುದಿಲ್ಲ.

7) ಸಾಮಗ್ರಿಗಳು ಎಲ್ಲಾ ರೀತಿಯ ತೆರಿಗೆಗಳು ಸೇರಿಕೊಂಡಿರತಕ್ಕದ್ದು.

8) ಸರಬರಾಜುದಾರರು ಸಾಮಗ್ರಿಗಳನ್ನು ಸರಬರಾಜು ಮಾಡಿದ ನಂತರ ಬಿಲ್ಲು ಪಾವತಿ ಮಾಡಲಾಗುವುದು.

9) ಸಾಮಗ್ರಿಗಳ ಪ್ರಮಾಣವನ್ನು ಬೇಡಿಕೆಗಳಿಗೆ ಅನುಗುಣವಾಗಿ ಆದೇಶ ನೀಡಲಾಗುವುದು.

10) ಐ.ಎಸ್.ಐ./ಐ.ಎಸ್.ಓ. ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ಈ ಕಾರ್ಯಾಲಯಕ್ಕೆ ಪೂರೈಸತಕ್ಕದ್ದು.

11) ಟೆಂಡರ ಮಂಜೂರಾದವರು ರೂ. 200/- ಛಾಪಾ ಕಾಗದದ ಮೇಲೆ ಕರಾರು ಪತ್ರ ಬರೆದು ಕೊಡತಕ್ಕದ್ದು.

12) ಟೆಂಡರ ಮಂಜೂರಿ ಆದವರು ಟೆಂಡರ ಮೌಲ್ಯದ ಮೇಲೆ ಶೇ. 5% ಭದ್ರತಾ ಠೇವಣಿ ನೀಡತಕ್ಕದ್ದು.- ಅದರನ್ನು ಟೆಂಡರ ಅವಧಿ ಮುಕ್ತಾಯ ಆದ ನಂತರ ಮರುಪಾವತಿ ಮಾಡಲಾಗುವುದು.

(ಎಸ್. ಎಸ್. ನಕುಲ್)
ಜಿಲ್ಲಾಧಿಕಾರಿ,
ಉತ್ತರ ಕನ್ನಡ ಕಾರವಾರ.

<u>ಪ್ರತಿ:</u>

1) ಡಿಸ್ಟ್ರಿಕ್ಟ್ ಇನ್ ಫಾರ್ಮೇಟಿಕ್ ಆಫೀಸರ್, ಎನ್.ಐ.ಸಿ. ಜಿಲ್ಲಾ ಪಂಚಾಯತ್, ಉ.ಕ. ಕಾರವಾರ ಇವರಿಗೆ ಸದ್ರಿ ಪ್ರಕಟಣೆಯನ್ನು Website Address: http://uttarakannada.nic.in ನಲ್ಲಿ ಅಳವಡಿಸಲು ಕಳುಹಿಸಿದೆ.
2) ಕಾರ್ಯಾಲಯದ ಸೂಚನಾ ಫಲಕಕ್ಕೆ.
3) ಜಿಲ್ಲಾಧಿಕಾರಿ ಕಚೇರಿ ಟೆಂಡರ ಬುಲೇಟೆನ್ ಶಾಖೆಗೆ ಸೂಕ್ತ ಕ್ರಮದ ಕುರಿತು.
4) ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರವಾರ ಇವರಿಗೆ ದಿನಪತ್ರಿಕೆಯಲ್ಲಿ ಪ್ರಕಟಿಸಲು ಸೂಚಿಸಿದೆ.